ದಿನಾಂಕಃ 27.05.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಮ್.ಪಿ. ವಕೀಲರಿಂದಃ**

ನನ್ನ ಹೆಸರಿನಲ್ಲಿ 9353444822 ಎಂಬ ದೂರವಾಣಿ ಸಂಖ್ಯೆಯು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಅದೇ ರೀತಿ 9480116242 ಎಂಬ ದೂರವಾಣಿ ಸಂಖ್ಯೆಯೂ ಸಹಾ ನನ್ನ ಹೆಸರಿನಲ್ಲಿ ಇದೆ. ಅವುಗಳಲ್ಲಿ 9353444822 ಎಂಬ ದೂರವಾಣಿ ಸಂಖ್ಯೆಯು ನನ್ನ ಇ-ಮೇಲ್ ಖಾತೆಗೆ ಹೊಂದಿಕೊಂಡಿರುತ್ತದೆ ಎಂಬುದರ ಬಗ್ಗೆ ನನಗೆ ತಿಳುವಳಿಕೆ ಇರುವುದಿಲ್ಲ. ಅದೇ ರೀತಿ ನನ್ನ ಇ-ಮೇಲ್ ಖಾತೆಗೆ ಯಾವ ದೂರವಣಿ ಸಂಖ್ಯೆಯೂ ಹೊಂದಿರುಕೊಂಡಿರುತ್ತದೆ ಎಂದು ಮಾಹಿತಿ ಇಲ್ಲ. 9480116242 ಎಂಬ ದೂರವಾಣಿ ಸಂಖ್ಯೆಯಲ್ಲಿ ಒಂದು ವಾಟ್ಸ್ ಆಪ್ ಖಾತೆ ಇರುತ್ತದೆ ಎಂದರೆ ಸರಿ. ನನ್ನ ಪತ್ನಿಯ ಹೆಸರು ಪೂಜಾ ಎಂದರೆ ಸರಿ. ನನಗೆ ರುದ್ರೇಶ್, ದಯಾನಂದ್ ಮತ್ತು ಮಂಜುಳ ಎಂಬುವರ ಪರಿಚಯ ನನಗಿರುವುದಿಲ್ಲ. ಗೋ-20 ಎಂಬ ಒಂದು ಸ್ಕೀಮ್ ನ ಅಡಿ ಪೂಜಾ, ರುದ್ರೇಶ್, ದಯಾನಂದ್, ಮಂಜುಳ ಮತ್ತು ನಾನು ಏಜೆಂಟ್ ಆಗಿದ್ದೇವೆ ಎಂದರೆ ಸರಿಯಲ್ಲ. ಸದರಿ ಸ್ಕೀಮ್ ನ ಅಡಿಯಲ್ಲಿ ನನಗೆ ಸಂಸ್ಥೆಯವರು ಜಿ.ಬಿ.ಸಿ 10200617 ಎಂಬ ಅಡಿಯಲ್ಲಿ ಐಡಿ ಯನ್ನು ವಿತರಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಗೋ 20 ಸ್ಕೀಮ್ ಅಡಿಯಲ್ಲಿ ಎಲ್ಲಾ ವ್ಯವಹಾರಗಳನ್ನು ನೀವೇ ನಡೆಸುತ್ತಿದ್ದಿರಿ ಎಂದರೆ ಸರಿಯಲ್ಲ. ಅದೇ ರೀತಿ ಮಂಜುಳ ಎಂಬುವರು ಸದರಿ ಸ್ಕೀಮ್ ನ ಅಡಿಯಲ್ಲಿ ಏಜೆಂಟ್ ಆಗಿರುವುದರಿಂದ ಜಿ.ಬಿ.ಸಿ 0316176 ಎಂಬ ಒಂದು ಐಡಿ ಯನ್ನು ವಿತರಿಸಿದ್ದರು ಎಂದರೆ ಸರಿಯಲ್ಲ.

ಆರೋಪಿಗೆ ಸೇರಿದ ವಾಟ್ಸ್ ಆಪ್ ಖಾತೆಗೆ ನಾನು ಅವರೊಂದಿಗೆ ಮಾತುಕತೆ ಮಾಡುತ್ತಿದೆ ಎಂದರೆ ಸರಿಯಲ್ಲ. ಈ ಹಿಂದೆ ಹೇಳಿದಂತೆ ಗೋಣೀಬೀಡು ಶಾಖೆಯಲ್ಲಿ ಕರ್ನಾಟಕ ಬ್ಯಾಂಕ್ ನಲ್ಲಿರುವ ಖಾತೆ ಸಂಖ್ಯೆಯನ್ನು ಹೇಳಲು ಪಾಸ್ ಬುಕ್ ಏನಾದರೂ ನೋಡಿಕೊಂಡು ಬಂದಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಖಾತೆಗೆ ಸಂಬಂಧಿಸಿದ ಪಾಸ್ ಬುಕ್ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ಖಾತೆಯ ಪಾಸ್ ಬುಕ್ ಅನ್ನು ಹಾಜರು ಮಾಡಿದ್ದಲ್ಲಿ ನೀವು ಗೋ-20 ಸ್ಕೀಮ್ ನಲ್ಲಿ ಮಾಡಿರುವಂತಹ ವ್ಯವಹಾರವು ತಿಳಿದುಬರುತ್ತದೆ, ಆದ ಕಾರಣ ನೀವು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಯಾವ ವಿಚಾರವೂ ಇರುವುದಿಲ್ಲ, ಅದನ್ನು ಮತ್ತು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ತಮ್ಮ ವಾಟ್ಸ್ ಆಪ್ ಖಾತೆಯ ಪ್ರೊಫೈಲ್ ಹೆಸರು ರತನ್ ಗೋಣೀಬೀಡು ಎಂಬುದನ್ನು ನೀವು ನೋಡಿದ್ದೀರ ಎಂದರೆ, ಆ ರೀತಿ ಯಾವುದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಕೀಲರ ಮೂಲಕ ತಿಳುವಳಿಕೆ ಪತ್ರ ನೀಡುವ ಮುನ್ನ ನನ್ನ ವೃತ್ತಿಯ ಬಗ್ಗೆ ಯಾವುದೇ ಮಾಹಿತಿಯನ್ನು ದೂರಿನಲ್ಲಿ ಅಥವಾ ತಿಳುವಳಿಕೆ ಪತ್ರದಲ್ಲಿ ನಮೂದಿಸಿರುವುದಿಲ್ಲ.

20 ಸಾವಿರ ರೂಗಳ ಮೇಲ್ಪಟ್ಟು ವ್ಯವಹರಿಸಬೇಕಾದರೆ ಅದನ್ನು ಅಕೌಂಟ್ ಪೇಯೀ ಚೆಕ್ ಮುಖಾಂತರ ಮಾಡಬೇಕು ಎಂಬುದರ ಮಾಹಿತಿ ನನಗೆ ತಿಳಿದಿರುವುದಿಲ್ಲ. ನಾನು ಆದಾಯ ತೆರಿಗೆಯನ್ನು ಪಾವತಿಸುತ್ತೇನೆ. ಕಳೆದ 1 ವರ್ಷದಿಂದ ನಾನು ಯಾವುದೇ ಆದಾಯ ತೆರಿಗೆಯನ್ನು ಪಾವತಿಸಿರುವುದಿಲ್ಲ. ಸದರಿ ಆದಾಯ ತೆರಿಗೆಯು ಹಿಂದಿನ ವರ್ಷದ ಆದಾಯದ ಬಾಬ್ತು ಪಾವತಿಸಲಾಗುತ್ತದೆ ಎಂದರೆ ಸರಿ. ಅದೇ ರೀತಿ 2024-25 ರ ಆದಾಯ ತೆರಿಗೆ ಪಾವತಿಯ ಬಗ್ಗೆ ನಾನು ವಿಚಾರಿಸಿ ನೋಡಬೇಕು. ಅದೇ ರೀತಿ 2023-24 ರ ಹಿಂದಿನ ವರ್ಷದ ಹಣಕಾಸಿನ ವ್ಯವಹಾರವನ್ನು 2023-24 ರ ಆದಾಯ ತೆರಿಗೆಯಲ್ಲಿ ತೋರಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಿ.20.07.2023 ರಂದು ಆದಂತಹ ವ್ಯವಹಾರದ ಬಗ್ಗೆ ನಾನು ಆದಾಯ ತೆರಿಗೆ ಪಾವತಿಸುವಾಗ ನಮೂದಿಸಿರುವುದಿಲ್ಲ. ನಾನು 3-4 ಬ್ಯಾಂಕ್ ನೊಂದಿಗೆ ವ್ಯವಹರಿಸುತ್ತೇನೆ. ಅವುಗಳಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ಜನ್ನಾಪುರ ಶಾಖೆಯಲ್ಲಿ ಸಾಲದ ಸಲುವಾಗಿ ವ್ಯವಹರಿಸಿರುತ್ತೇನೆ. ಸದರಿ ಬ್ಯಾಂಕ್ ನ ಶಾಖೆಯೊಂದಿಗೆ ಕಳೆದ 4-5 ವರ್ಷದಿಂದ ವ್ಯವಹರಿಸುತ್ತಿರುತ್ತೇನೆ. ಸದರಿ ಬ್ಯಾಂಕ್ ನಿಂದ ಎಷ್ಟು ಮೊತ್ತದ ಸಾಲವನ್ನು ಪಡೆದಿರುತ್ತೇನೆ ಎಂದು ನೆನಪಿರುವುದಿಲ್ಲ. ಈಗಲೂ ಸಹಾ ಸದರಿ ಸಾಲದ ಖಾತೆ ಚಾಲ್ತಿಯಲ್ಲಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.